**<u>ಸಾಕ್ಷಿಯನ್ನು ದಿನಾಂಕ 24-06-2026 ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು</u>.**

**<u>ಪಾಟೀ ಸವಾಲುಃ 1 ನೇ ಪ್ರತಿವಾದಿ ಪರ ಶ್ರೀ ಮಂಜಪ್ಪ ವಕೀಲರಿಂದಃ</u>**

1. ನಾನು ಹುಟ್ಟಿನಿಂದಲೂ ವ್ಯವಸಾಯ ವೃತ್ತಿ ಮಾಡುತ್ತಿದ್ದೇನೆ. ನನಗೆ ಗೋಣಿಬೀಡು ಗ್ರಾಮದ ಸರ್ವೆ ನಂಬರ್ 52 ರಲ್ಲಿ ಒಟ್ಟು 5 ಎಕರೆ 5 ಗುಂಟೆ ಜಮೀನಿನ ಪೈಕಿ ನನಗೆ 2 ಎಕರೆ ಜಮೀನು ಇದೆ. 1 ನೇ ವಾದಿ ಬೆಂಗಳೂರಿನ ಖಾಸಗಿ ಕಾರ್ಖಾನೆಯಲ್ಲಿ ಕೆಲಸ ಮಾಡಿ ಈಗ ನಿವೃತ್ತರಾಗಿದ್ದಾರೆ. ಅವರು ಕಳೆದ 20 ವರ್ಷಗಳಿಂದ ಬೆಂಗಳೂರಿನಲ್ಲೇ ವಾಸವಿದ್ದಾರೆ. ಅವರು ಗೋಣಿಬೀಡಿನಲ್ಲಿ ಯಾವತ್ತು ವಾಸವಿರಲಿಲ್ಲ ಎಂದರೆ ಸಾಕ್ಷಿ 20 ವರ್ಷದ ಹಿಂದೆ ಇದ್ದರು ಎನ್ನುತ್ತಾರೆ. ಅವರಿಗೆ ನಮ್ಮ ಊರಿನಲ್ಲಿ ಯಾವುದೇ ಜಮೀನು ಇಲ್ಲ. ಸಾಕ್ಷಿ ಪುನಃ ಅವರ ತಂದೆ ಪಾಲಿನ 1 ಎಕರೆ ಆಸ್ತಿಯನ್ನು ತಲಾ ½ ಎಕರೆಯಂತೆ 1 ನೇ ವಾದಿ ಹಾಗೂ ಅವರ ಸಹೋದರ 1 ನೇ ಪ್ರತಿವಾದಿ ಕೊಡಲಾಗಿದೆ ಎನ್ನುತ್ತಾರೆ. 1 ಎಕರೆ 10 ಗುಂಟೆ ಜಮೀನನ್ನು ಸಂಪೂರ್ಣ 1 ನೇ ಪ್ರತಿವಾದಿ ವ್ಯವಸಾಯ ಮಾಡುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿ ಪುನಃ 1 ಎಕರೆ ಜಮೀನನ್ನು ಮಾತ್ರ 1 ನೇ ಪ್ರತಿವಾದಿ ಕಳೆದ 20 ವರ್ಷಗಳಿಂದ ಸಾಗುವಳಿ ಮಾಡುತ್ತಿದ್ದಾರೆ ಎನ್ನುತ್ತಾರೆ.

2. ನನ್ನ ಹಾಗೂ 1 ನೇ ವಾದಿ ಮತ್ತು 1 ನೇ ಪ್ರತಿವಾದಿ ನಡುವೆ ಜಮೀನು ಹಂಚಿಕೆಯಾಗಿದೆ. ಸಾಕ್ಷಿ ಸ್ವ ಇಚ್ಛೆಯಿಂದ ಊರಿನಲ್ಲಿ ನಡೆದ ಪಂಚಾಯತಿಯಲ್ಲಿ ಪಾಲು ಮಾಡಿಕೊಟ್ಟಿದ್ದಾರೆ ಎನ್ನುತ್ತಾರೆ. ಸದರಿ ಪಾಲು ವಿಭಾಗ 1997 ರಲ್ಲಿ ಆಗಿತ್ತು. 1 ನೇ ಪ್ರತಿವಾದಿ ತನ್ನ ತಾಯಿಯೊಂದಿಗೆ ಗೋಣಿಬಿಡಿನಲ್ಲಿ ವಾಸವಿದ್ದರು ಮತ್ತು 1 ಎಕರೆ 10 ಗುಂಟೆ ಜಮೀನನ್ನು

ಒಟ್ಟಿಗೆ ಸಾಗುವಳಿ ಮಾಡುತ್ತಿದ್ದರು ಎಂದರೆ ಸಾಕ್ಷಿ 1 ಎಕರೆ ಮಾತ್ರ ಸಾಗುವಳಿ ಮಾಡುತ್ತಿದ್ದರು ಎನ್ನುತ್ತಾರೆ. 1 ನೇ ವಾದಿ ಮತ್ತು 1 ನೇ ಪ್ರತಿವಾದಿಯ ತಂದೆ ಕಾಳ್ಯ ನಾಯಕನಿಗೆ ಇಬ್ಬರು ಹೆಣ್ಣು ಮತ್ತು ಇಬ್ಬರು ಗಂಡು ಮಕ್ಕಳು.

3. ವಾದಿ–ಪ್ರತಿವಾದಿಯರು ಒಟ್ಟು ಕುಟುಂಬದ ಸದಸ್ಯರಾಗಿ ಜಮೀನುಗಳನ್ನು ಒಟ್ಟಾಗಿ ಸಾಗುವಳಿ ಮಾಡುತ್ತಿದ್ದೇವೆ ಎಂದು ವಾದ ಪತ್ರದಲ್ಲಿ ಬರೆಸಿಲ್ಲ. ಸಾಕ್ಷಿ ಪುನಃ 1997 ರಲ್ಲಿ ನಮ್ಮ ನಡುವೆ ಪಾಲು ವಿಭಾಗ ಆಗಿದೆ ಎನ್ನುತ್ತಾರೆ. ಸದರಿ ಪಾಲು ವಿಭಾಗದಲ್ಲಿ ನನ್ನ ಸ್ವಂತ ಅಣ್ಣಂದಿರಾದ ಗಂಗ್ಯನಾಯಕ, ಕಾಳ್ಯ ನಾಯಕ ಮತ್ತು ಲಲ್ಯನಾಯಕ ರವರಿಗೆ ತಲಾ 1 ಎಕರೆ ಆಸ್ತಿ ಕೊಡಲಾಗಿತ್ತು. ಸದರಿ ವಿಷಯವನ್ನು ವಾದ ಪತ್ರದಲ್ಲಿ ಬರೆಸಿಲ್ಲ. ನಾನು ಮತ್ತು ನನ್ನ ಅಣ್ಣಂದಿರು ಪ್ರತ್ಯೇಕ ಮನೆಗಳನ್ನು ಕಟ್ಟಿ ಪ್ರತ್ಯೇಕವಾಗಿ ವಾಸವಿದ್ದೆವು ಎಂದರೆ ಸಾಕ್ಷಿ ಒಂದೇ ಮನೆಯಲ್ಲಿದ್ದೆವು ಎನ್ನುತ್ತಾರೆ. ಪಾಲು ವಿಭಾಗ ಕೋರಿ ನಾನು ನನ್ನ ಅಣ್ಣಂದಿರ ವಿರುದ್ಧ ಎಂದೂ ದಾವೆ ಹಾಕಿಲ್ಲ ಎಂದರೆ ಸರಿ.

4. ನನ್ನ ಅಣ್ಣ ಮತ್ತು 1 ನೇ ವಾದಿ ಮತ್ತು 1 ನೇ ಪ್ರತಿವಾದಿಯ ತಂದೆ ಕಾಳ್ಯನಾಯಕ ತೀರಿಕೊಂಡು ಸಮಾರು 25 ವರ್ಷ ಆಯಿತು. ಕಾಳ್ಯನಾಯಕನ ಮರಣದ ನಂತರ ಆತನ ಹೆಂಡತಿ ಪೀಕಿ ಬಾಯಿ ಸರ್ವೆ ನಂಬರ್ 52 ರಲ್ಲಿ 1 ಎಕರೆ 10 ಗುಂಟೆ ಜಮೀನನ್ನು ಸಾಗುವಳಿ ಮಾಡುತ್ತಿದ್ದರು ಎಂದರೆ ಸಾಕ್ಷಿ 20 ಗುಂಟೆ ಮಾತ್ರ ಸಾಗುವಳಿ ಮಾಡುತ್ತಿದ್ದರು ಎನ್ನುತ್ತಾರೆ. 1 ನೇ ಪ್ರತಿವಾದಿಯೇ ಆತನ ಸಹೋದರಿಯರ ಮದುವೆ ಮಾಡಿಸಿದ್ದ ಎಂದರೆ ಸರಿಯಲ್ಲ. ಪೀಕಿ ಬಾಯಿಯ ಅಂತಿಮ ದಿನಗಳಲ್ಲಿ 1 ನೇ ಪ್ರತಿವಾದಿಯೇ ಆಕೆಯನ್ನು

ನೋಡಿಕೊಂಡು ಎಲ್ಲಾ ರೀತಿಯ ಆರೈಕೆ ಮತ್ತು ಖರ್ಚು-ವೆಚ್ಚ ಮಾಡುತ್ತಿದ್ದ ಎಂದರೆ ಸರಿಯಲ್ಲ. ಆದ್ದರಿಂದ ಪೀಕಿ ಬಾಯಿಗೆ 1 ನೇ ಪ್ರತಿವಾದಿ ಮೇಲೆ ಅತಿಯಾದ ಪ್ರೀತಿ, ವಿಶ್ವಾಸ ಮತ್ತು ಮಮತೆ ಇತ್ತು ಎಂದರೆ ಸರಿಯಲ್ಲ. ಆದ್ದರಿಂದ ಸರ್ವೆ ನಂಬರ್ 52 ರಲ್ಲಿನ 1 ಎಕರೆ 10 ಗುಂಟೆ ಜಮೀನನ್ನು ಪೀಕಿ ಬಾಯಿ 1 ನೇ ಪ್ರತಿವಾದಿಯ ಹೆಸರಿಗೆ ವಿಲ್ ಮಾಡಿದರು ಎಂದರೆ ಸರಿಯಲ್ಲ. ಸಾಕ್ಷಿದಾರರ ಸಮಕ್ಷಮ ಸದರಿ ವಿಲ್ ನ್ನು ಬರೆಸಿ ಪೀಕಿ ಬಾಯಿ ಅದನ್ನು ನೊಂದಣಿ ಮಾಡಿಸಿದ್ದರು ಎಂದರೆ ಸಾಕ್ಷಿ ನಮಗೆ ಗೊತ್ತಿಲ್ಲದಂತೆ ವಿಲ್ ಮಾಡಿಸಿದ್ದಾರೆ ಎನ್ನುತ್ತಾರೆ. ಸದರಿ ವಿಷಯ 1 ನೇ ವಾದಿ ಮತ್ತು ಆತನ ಹೆಂಡತಿ-ಮಕ್ಕಳಿಗೆ ಗೊತ್ತಿತ್ತು ಎಂದರೆ ಸರಿಯಲ್ಲ. 1 ನೇ ವಾದಿ ಮತ್ತು 1 ನೇ ಪ್ರತಿವಾದಿಯ ಅಕ್ಕ-ತಂಗಿಯರಿಗೂ ಸದರಿ ವಿಷಯ ಗೊತ್ತಿತ್ತು ಎಂದರೆ ಸರಿಯಲ್ಲ.

5. ಪೀಕಿ ಬಾಯಿ ದಿನಾಂಕ 03.08.2018 ರಂದು ತೀರಿಕೊಂಡರು ಎಂದರೆ ಸರಿ. ಆಕೆಯ ಮರಣದ ನಂತರ 1 ಎಕರೆ 10 ಗುಂಟೆ ಜಮೀನನ್ನು 1 ನೇ ಪ್ರತಿವಾದಿಯೇ ಸಾಗುವಳಿ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿ ಸ್ವ ಇಚ್ಚೆಯಿಂದ ತಲಾ 20 ಗುಂಟೆಯಲ್ಲಿ 1 ನೇ ವಾದಿ ಮತ್ತು 1 ನೇ ಪ್ರತಿವಾದಿಯರಿಬ್ಬರು ಅಡಿಕೆ ತೋಟ ಮಾಡಿಕೊಂಡಿದ್ದಾರೆ ಎನ್ನುತ್ತಾರೆ. ಸದರಿ ವಿಷಯವನ್ನು ವಾದ ಪತ್ರ ಮತ್ತು ನನ್ನ ಪ್ರಮಾಣ ಪತ್ರದಲ್ಲಿ ಬರೆಸಿಲ್ಲ ಎಂದರೆ ಸರಿಯಲ್ಲ.

6. 1997 ರಲ್ಲಿ ಪಾಲು ವಿಭಾಗ ಆಗಿತ್ತು ಎಂಬ ವಿಷಯವನ್ನು ವಾದ ಪತ್ರ ಮತ್ತು ಪ್ರಮಾಣ ಪತ್ರದಲ್ಲಿ ಬರೆಸಿಲ್ಲ ಎಂದರೆ ಸರಿಯಲ್ಲ. ನನ್ನ 3 ಜನ ಅಣ್ಣಂದಿರು ತೀರಿಕೊಂಡಿದ್ದಾರೆ. ನನ್ನ ಅಣ್ಣಂದಿರು ಮತ್ತು ಅವರ ಮಕ್ಕಳ ಸಂಪೂರ್ಣ ವಿವರಗಳನ್ನು ನ್ಯಾಯಾಲಯಕ್ಕೆ ಕೊಟ್ಟಿಲ್ಲ

ಎಂದರೆ ಸರಿಯಲ್ಲ. ದಾವಾಸ್ತಿ ನನಗೆ ಹೇಗೆ ಬಂತು ಎನ್ನುವುದನ್ನು ವಾದ ಪತ್ರದಲ್ಲಿ ಅಥವಾ ನನ್ನ ಪ್ರಮಾಣ ಪತ್ರದಲ್ಲಿ ಬರೆಸಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿ ನನಗೆ ಯಾವ ರೀತಿ ಹಕ್ಕು ಬಂದಿದೆ ಎನ್ನುವುದನ್ನು ಬರೆಸಿಲ್ಲ ಎಂದರೆ ಸರಿಯಲ್ಲ.

7. ಪೀಕಿ ಬಾಯಿ ಬರೆದಿರುವ ವಿಲ್ ನ್ನು ನ್ಯಾಯಾಲಯಕ್ಕೆ ಕೊಟ್ಟಿಲ್ಲ. ನೊಂದಾಯಿತ ಸದರಿ ವಿಲ್ ನ ದೃಢಿಕೃತ ನಕಲನ್ನು ಪಡೆದುಕೊಂಡಿದ್ದೇನೆ. ಪೀಕಿ ಬಾಯಿ ದಾವಾ ಸ್ವತ್ತನ್ನು ವಿಲ್ ಮೂಲಕ 1 ನೇ ಪ್ರತಿವಾದಿಗೆ ಕೊಟ್ಟಿರುವುದರಿಂದ ಸದರಿ ಆಸ್ತಿ ಮೇಲೆ ನಮ್ಮ ಯಾವುದೇ ಹಕ್ಕು–ಅಧಿಕಾರ ಇಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯರ ವಿರುದ್ಧ ದಾವೆ ಸಲ್ಲಿಸಲು ನನಗೆ ಯಾವುದೇ ರೀತಿಯ ಹಕ್ಕು ಇಲ್ಲ ಎಂದರೆ ಸರಿಯಲ್ಲ. ದಾವೆ ದಾಖಲಿಸುವ ಮೊದಲು ಪ್ರತಿವಾದಿಯರಿಗೆ ನಾನು ನೋಟಿಸು ಕೊಟ್ಟಿಲ್ಲ, 1 ನೇ ವಾದಿ ಕೊಟ್ಟಿದ್ದಾರೆ ಎಂದರೆ ಸರಿ. ಈ ದಾವೆಯಲ್ಲಿ ಕೇಳಿರುವ ಪರಿಹಾರ ಪಡೆಯಲು ಅರ್ಹರಲ್ಲ ಎಂದರೆ ಸರಿಯಲ್ಲ. ಪೀಕಿ ಬಾಯಿ ವಿಲ್ ಬರೆದ ವಿಚಾರ 1 ನೇ ವಾದಿಗೆ ಸಂಪೂರ್ಣ ಗೊತ್ತಿದ್ದು, ಹಾಗಾಗಿ ಆತ ನ್ಯಾಯಾಲಯಕ್ಕೆ ಸಾಕ್ಷಿ ಹೇಳಲು ಬಂದಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ: ಇಲ್ಲ.**

(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ.

**ಪ್ರಧಾನ ಸಿವಿಲ್ ನ್ಯಾಯಾಧೀಶರು,**

**ಭದ್ರಾವತಿ.**